**<u>ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.</u>**

**<u>ಸಿ.ಸಿ. ನಂ. 348/2025.</u>**

**ಸಿ ಡಬ್ಲ್ಯೂ: 5**

**ಪಿ ಡಬ್ಲ್ಯೂ: 7**

| | | |
|---|---|---|
| ಹೆಸರು | : | ಬಸವರಾಜ ಕಲ್ಲೇಶ್ವರ |
| ತಂದೆಯ ಹೆಸರು | : | ಗದಿಗೆಪ್ಪ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹಿರೇಹಳ್ಳಿ |

**<u>ದಿನಾಂಕ: 27-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಎಪಿಪಿ ರವರಿಂದ:</u>**

ಈಗ ಸಾಕ್ಷಿಗೆ ನಿಪಿ-10 ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10ಸಿ ಎಂದು ಗುರುತಿಸಲಾಯಿತು. ನಿಪಿ-12 ರಿಂದ 19 ಪೋಟೊ ನೋಡಿ ಗುರುತಿಸಿರುತ್ತಾರೆ. ನಾನು ಸಹಿಯನ್ನು 2021 ರಲ್ಲಿ ಹೊಲಕ್ಕೆ ಹೋಗುವ ಸಮಯದಲ್ಲಿ ಮಾಡಿರುತ್ತೇನೆ. ಸದರಿ ಸಹಿಯನ್ನು ಬಡಮಲ್ಲಿ ಗ್ರಾಮದ ಜಮೀನಿನಲ್ಲಿ ಮಾಡಿರುತ್ತೇನೆ. ಘಟನೆಯ ಹಿನ್ನೆಲೆಯಲ್ಲಿ ಪಂಚನಾಮೆಗೆ ಪಡೆದಿರುತ್ತಾರೆ. ಆ ಕಾಲಕ್ಕೆ ಚಾಸಾ-4 ರವರು ಹಾಜರಿದ್ದರು. ಚಾಸಾ-1 ರವರು ಸ್ಥಳ ತೋರಿಸಿರುತ್ತಾರೆ. ನಂತರ ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆಯನ್ನು ಮಧ್ಯಾಹ್ನ 04.00 ರಿಂದ 05.00 ಗಂಟೆ ವರೆಗೆ ಮಾಡಿರುತ್ತಾರೆ. ಸ್ಥಳದಿಂದ 2 ಚಪ್ಪಲಿಯನ್ನು ತೆಗೆದುಕೊಂಡರು. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ಚಪ್ಪಲಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಓ 1 ಮತ್ತು 2 ಎಂದು ಗುರುತಿಸಲಾಗಿದೆ.

ಸಿ.ಸಿ. ನಂ. 348/2025 ಸಿ. ಡಬ್ಲ್ಯೂ.5
ಪಿ. ಡಬ್ಲ್ಯೂ.7

**<u>ಪಾಟೀ ಸವಾಲು 1 ರಿಂದ 8 ನೇ ಆರೋಪಿತರ ಪರ ಶ್ರೀ ವಿ.ಎಂ.ಎನ್. ವಕೀಲರಿಂದಃ</u>**

ನಾನು ಬ್ಯಾಡಗಿ ತಾಲೂಕು ಹಿರೇಹಳ್ಳಿ ಗ್ರಾಮದವನು. ಚಾಸಾ-1 ನಮ್ಮ ಸಂಬಂಧಿಕರು ಇರುವುದಿಲ್ಲ. ಅವರು ಪರಿಚಯಸ್ಥರು. ನನಗೆ ಓದಲು ಬರೆಯಲು ಬರುತ್ತದೆ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಪಂಚನಾಮೆ ಮಾಡುವಾಗ ಪೊಟೊ ತೆಗೆದಿರುತ್ತಾರೆ. ಪಂಚನಾಮೆ ಮಾಡಿದ ಕಾಲಕ್ಕೆ ನೋಟಿಸ್ಸು ನೀಡಿರುವುದಿಲ್ಲ. ನಾನು ಜಮೀನಿಗೆ ಹೋಗಿದ್ದೆ ಆವಾಗ ಕರೆದರು. ನಾವು ಆ ದಿನ ಶುಂಟಿ ನೋಡಲು ಹೊರಟಿದ್ದೆವು. ಪಂಚನಾಮೆ ಕಾಲಕ್ಕೆ 4 ಜನ ಇದ್ದೆವು. 2 ಪೋಲಿಸರು ಇದ್ದರು. ನಾನು ಮತ್ತು ನನ್ನ ಕಾಕಾ ಇದ್ದೆವು. ಬೇರೆದವರ ಹೆಸರು ಗೊತ್ತಿಲ್ಲ. ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಆ ಜಮೀನಿನಲ್ಲಿ ಯಾವುದೇ ಬೆಳೆ ಇರಲಿಲ್ಲ. ಪೋಲಿಸರು ಹೇಳಿದ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಆ ದಿನ ನನ್ನ ಸಮಕ್ಷಮ ಯಾವುದೇ ವಸ್ತು ಜಪ್ತಿ ಮಾಡಿಕೊಂಡ ಬಗ್ಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಪೊಟೊ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

9 ರಿಂದ 11 ಆರೋಪಿ ಪರ ವಕೀಲರು 1 ರಿಂದ 8 ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.